ತುಮಕೂರು ಡಿಸ್ಟ್ರಿಕ್ಟ್.
ನೋಟಿಫಿಕೇಷ್ಯ.

ತಾರೀಖು 16ನೇ ಜನವರಿ 1896ನೇ ಇಸವಿ.

ರಿಜಿಸ್ಟ್ರೇಷ್ಯ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ 1889ನೇ ಇಸವಿ 6ನೇ ನಂಬರ್ ಸರ್‌ಕ್ಯುಲರ್ ಹುಕುಂ ಪ್ರಕಾರ ತುಮಕೂರು ಡಿಸ್ಟ್ರಿಕ್ಟಿಗೆ ಕೇರಿದ ಸಬ್ ಡಿ|| ಬೂಬತು ಈ ಕೆಳಗೆ ನಮೂದಾಗುವ ದಸ್ತೈವಜುಗಳು 1895ನೇ ಇಸವಿ ಡಿಸೆಂಬರ್ ಅಖೈರ್ ವರಿಗೆ ಬೇವಾರಸ್ಸಾಗಿರುವದ್ದರಿಂದ ನಾಶವಾಡಲ್ಪಡುವದು.

ಆಫೀಸಿನ ಹೆಸರು.	ನಂಬರು ಮತ್ತು ತಾರೀಖು.	ದಸ್ತೈವಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ.	ಪರಾ.
ತುಮಕೂರು	561 1892-93	8- 1-93	14- 3-93	ರುದ್ರಪ್ಪನ ಹೆಂಡತಿ ಸಿದ್ದಮ್ಮ	ವೀರಪ್ಪಶಾಸ್ತ್ರಿ	ಕ್ರಯ 95 ರೂಪಾಯಿಗೆ ಪರಿವರ್ತನೆ	
ಡಿಟೋ	10 1893—94	5- 7-93	5- 7-93	1ನೇ ಫಕ್ರುದ್ದೀನ್‌ಸಾಬಿ 2ನೇ ಗುಲಾಂ ಮೊಹಿದೀನ್‌ಸಾಬಿ	1ನೇ ತಿಲೇವ್ಮಾಸಾಬಿ 2ನೇ ಹಸ್ರತ್‌ಸಾಬಿ	50 ರೂಪಾಯಿನ ಕಿಮ್ಮತ್ತಿನ ಸ್ಥಿತಿಗಳಿಗೆ	
ಡಿಟೋ	124 1893—94	5- 8-93	26- 8-93	ಸಿದ್ದಹೊನ್ನಯ್ಯ ಮೈನರ್ ಗಾರ್ಡಿಯನ್ ತಾಯಿ ಸಿದ್ದನಂಜಮ್ಮ	ಶಾಮರಾವ್	ಕ್ರಯ 15 ರೂಪಾಯಿಗಳಿಗೆ	
ಗುಬ್ಬಿ	91 1892—93	20- 6-92	27- 6-92	ರಂಗಯ್ಯ	ವೆಂಕಮ್ಮ	ಕ್ರಯ 200 ರೂಪಾಯಿಗಳಿಗೆ	
ಡಿಟೋ	232 1893—94	14-12-93	20-12-93	ವೆಂಕಟರಮಣಪ್ಪ	ಕೂರಪ್ಪ	ಕ್ರಯ 130 ರೂಪಾಯಿಗೆ	
ಕುಣಿಗಲ್	108 1892—93	8- 4-92	8- 6-92	ರಾಮಯ್ಯ	ರಂಗಣ್ಣ	ಕ್ರಯ 50 ರೂಪಾಯಿಗೆ	
ಡಿಟೋ	119 1892—93	19- 6-92	21- 6-92	ಲಚ್ಚ	ರಾಮ	ಕ್ರಯ 32 ರೂಪಾಯಿಗೆ	
ಡಿಟೋ	468 1892—93	17- 3-93	17- 3-93	ಲಿಂಗಪ್ಪಯ್ಯ	ಗುಂಡಪ್ಪ	ಭೋಗ್ಯ 75 ರೂಪಾಯಿಗೆ	
ಡಿಟೋ	563 1892—93	25- 5-93	25- 5-93	ಉನ್ಮತ್‌ಸಾಬಿ	ಲಿಂಗಣ್ಣ	ಗೇಣೀಚೀಟು 3 ವರುಷಗಳಿಗೆ	

1896ನೇ ಇಸವಿ ಫಿಬ್ರವರಿ ತಾಯಿನು ತಗದುಕೊಳ್ಳಿದ ಪಕ್ಷದಲ್ಲಿ ನಾಶ ಮಾಡಲ್ಪಡುತ್ತೆ.

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ತಾರೀಖು 12ನೇ ಜನವರಿ 1896.

ಇದರಿಂದ ಸರ್ವಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿಗೆ ಕೇರಿದ ಮಂಚಲ್‌ದೊರೆ ಸ್ಟೇಷ್ಟ್ ಫಾರೆಸ್ಟಿನಲ್ಲಿ ಸರ್ಕಾರೀತರ್ಫಿನಿಂದ ರೂಢಿಸಿರುವ 1500 ಮಣ ಉಳಲೇಕಾಯಿಯನ್ನ ಗುಬ್ಬೀ ತಾಲ್ಲೂಕು ಮಂಚಲ್‌ದೊರೆ ಗ್ರಾವುಕ್ಕೆ ಸಮೀಪದಲ್ಲಿರುವ ಮುಚ್ಚಲನಹಳ್ಳಿಯಲ್ಲಿ 1896ನೇ ಇಸವಿ ಫಿಬ್ರವರಿ 5ನೇ ತಾರೀಖಿನಲ್ಲಿ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ಹರಾಜು ಮೊಬಲಗು ಪಾವತಿ ಆದ ಲಾಗಾಯಿತು ಕಾವಲ್ ಕಟ್ಟಣೆ ಹರಾಜ್‌ದಾರಿಗೆ ಹೊಂದಿರುತ್ತೆ.

ಷರತ್ತು—ಹರಾಜು ಕೈದಾದ ಕೂಡ್ಲೆ ಶೇಕಡಾ 25 ರೂಪಾಯಿನೆಂತೆ ಬೇವಣಿ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯಿತು ವೊಂದು ವಾರದವಳಗಾಗಿ ಬಾಕಿ ಮೊಬಲಗನ್ನ ಪೂರತಿ ಮಾಡಬೇಕು. ತಪ್ಪಿದಲ್ಲಿ ಮಾಲು ಪುನಹ ಹರಾಜು ಮಾಡಲ್ಪಡುತ್ತೆ, ಅಲ್ಲದೆ ನಷ್ಟಕ್ಕೆ ಮೊದಲ ಹರಾಜ್‌ದಾರನ್ನ ಗುರಿಮಾಡುತ್ತೆ. ಮತ್ತು ಬೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುತ್ತೆ.

ಇತರ ತಪ್ಸೀಲಿಗೆ 1887ನೇ ಇಸವಿ ಸೆಪ್ಟಂಬರು 3ನೇ ತಾರೀಖಿನ ಮೈಸೂರು ಗೆಜೆಟಿನಲ್ಲಿ ಘಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ತಾರೀಖಿನ 99ನೇ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸ್ ನೋಡಿ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೈಸೂರ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೫—96ನೇ ಇಸವಿ ಅರ್ಜೀ ನಂಬರ್ 247.

ಮೃತಪಟ್ಟ ಮುದಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, 1ನೇ ರಂಗಪ್ಪ, 2ನೇ ತಮ್ಮಯ್ಯ, 3ನೇ ಚಿಕ್ಕರಂಗಪ್ಪ, 4ನೇ ವೀರರಂಗಪ್ಪ, 5ನೇ ದೊಡ್ಡರಂಗಪ್ಪ ಇವರುಗಳು, ಮೃತಪಟ್ಟ ಸದರೀ ಮುದಿಯಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಕಟ್ಟಹಳ್ಳಿ ಹೋಬಳಿ ಅಗ್ರಹಾರ ಸ್ಥಳದ ಸದರೀ ರಂಗಪ್ಪ ವಗೈರೆ 5 ಜನರು, ಸದರೀ ವಾಸಸ್ಥರಾಗಿ ಮೃತಪಟ್ಟ ಮುದಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಪ್ಪ ವಗೈರೇರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೫–96ನೇ ಇಸವಿ ಅರ್ಜೀ ನಂಬರ್ 264.

ಮೃತಪಟ್ಟ ಅಗಸರ ಜೋರನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಜವರನು, ಮೃತಪಟ್ಟ ಸದರೀ ಜೋರನಿಗೆ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ನಗುವನಹಳ್ಳಿ ಸ್ಥಳದ ಸದರೀ ಜವರನು, ಸದರೀ ವಾಸಸ್ಥನಾಗಿ ಮೃತಪಟ್ಟ ಜೋರನ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಜವರನ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೋರನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೫–96ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ರಾಮಾಜೋಯಿಸರು, ಮೃತಪಟ್ಟ ಸದರೀ ಅಶ್ವತ್ಥಶಾಸ್ತ್ರಿಗಳಿಗೆ ವಿಲ್‌ಪಡೆದ ಹಕ್ಕುದಾರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ರಾಮಾಶಾಸ್ತ್ರಿಗಳು, ಸದರೀ ವಾಸಸ್ಥರಾಗಿ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಾಶಾಸ್ತ್ರಿಗಳ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಜನವರಿ ತಿಂಗಳ 21ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.